# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :58 ಫ್ರಾ.ಸಾ. : 59**

| | | |
|---|---|---|
| ಸಾಕ್ಷಿಯ ಹೆಸರು | : | ಕ್ಯಾಪ್ಟನ್ ಸಿ.ಸ್ವಾಮಿ |
| ತಂದೆಯ ಹೆಸರು | : | ಅಂದಾನಯ್ಯ |
| ವಯಸ್ಸು | : | 60 ವರ್ಷ |
| ಕೆಲಸ | : | ನಿವೃತ್ತ ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ |
| ವಾಸ | : | ಬೆಂಗಳೂರು. |

**ದಿನಾಂಕಃ 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-</u>**

1. ನಾನು ದಿ.01-062016 ರಿಂದ 31-05-2025 ರವರೆಗೆ ನಾನು ಕಾರವಾರದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿ ಚಾಸಾ-57 ಅರುಣ ಗಾಂವಕರ್ ರವರೂ ಸಹ ಬಂದರು ಕಚೇರಿಯಲ್ಲಿ ಬಂದರು ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

2. ದಿ.25-11-2018 ರಂದು ಕಾರವಾರದ ಪೊಲೀಸ್ ವೃತ್ತ ನಿರೀಕ್ಷಕರು ನನಗೆ ಒಂದು ಕೋರಿಕೆ ಪತ್ರ ನೀಡಿ, ಕಾರವಾರ ಬಂದರಿನಲ್ಲಿರುವ ಶಿಪ್ಪಿಂಗ್ ಏಜೆನ್ಸಿಗೆ ಸಂಬಂಧಿಸಿದಂತೆ ಹಾಗೂ ಮೃತ ಪ್ರೇಮ್ ಕುಮಾರನಿಗೆ ಸಂಬಂಧಿಸಿದ ಒಟ್ಟು 6 ಮಾಹಿತಿಗಳನ್ನು ಕೋರಿದ್ದು, ನಂತರ ನಾನು ಕೋರಿಕೆ ಪತ್ರದಲ್ಲಿ ತಿಳಿಸಿದ ಮಾಹಿತಿಗಳನ್ನು ಚಾಸಾ-57 ರವರಿಗೆ ಲಿಖಿತವಾಗಿ ನೀಡುವಂತೆ ಸೂಚಿಸಿರುತ್ತೇನೆ. ಅದರಂತೆ ಅವರು ಕಚೇರಿಯ ದಾಖಲೆಗಳನ್ನು ಪರಿಶೀಲಿಸಿ, ದಿ.05-12-2018 ರಂದು ಮಾಹಿತಿಗೆ ವಿವರವಾದ ಉತ್ತರವನ್ನು ನೀಡಿ ಹಾಗೂ ಏಜೆನ್ಸಿಗೆ ಸಂಬಂಧಿಸಿದ ಪ್ರತ್ಯೇಕ ಪಟ್ಟಿಗಳನ್ನು ಲಗತ್ತಿಸಿ, ನನಗೆ ನೀಡಿರುತ್ತಾರೆ. ನಂತರ ನಾನು ಸದರಿ

ಮಾಹಿತಿಗಳನ್ನು ದಿ.12-12-2018 ರಂದು ಕಾರವಾರದ ಪೊಲೀಸ್ ವೃತ್ತ ನಿರೀಕ್ಷಕರಿಗೆ ನೀಡಿರುತ್ತೇನೆ. ಸಾಕ್ಷಿಯು ತಮಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-108 ಎಂದು ಗುರುತಿಸಲಾಗಿದೆ. ಚಾಸಾ-57 ರವರು ನೀಡಿದ ಮಾಹಿತಿ ಪತ್ರವನ್ನು ಈಗಾಗಲೇ ನಿಪಿ-109 ಎಂದು ಗುರುತಿಸಲಾಗಿದೆ.

3. List of Steamer Agents Presently Regularly operating at Karwar Port ನ್ನು ಈಗಾಗಲೇ ನಿಪಿ-103 ಎಂದು, Stevedores/ clearing and forwarding agents ನ್ನು ಈಗಾಗಲೇ ನಿಪಿ-104 ಎಂದು, Ship Chandlers/ Garbage cleaners ನ್ನು ಈಗಾಗಲೇ ನಿಪಿ-105 ಎಂದು, other port users ನ್ನು ಈಗಾಗಲೇ ನಿಪಿ-106 ಎಂದು, statement showing the Intercarting of Bitumen Ships by M/s. Pioneer Shipping for the year 2016-17 to 2018-19 up to Oct-2018 as Stevedores ನ್ನು ಈಗಾಗಲೇ ನಿಪಿ-110 ಎಂದು, statement showing the M/s Karwar Shipping Agencies worked as Steamed agent for the year 2016-17 to 2018-19 up to Oct-2018 ನ್ನು ಈಗಾಗಲೇ ನಿಪಿ-111 ಎಂದು, statement showing the Intercarting of Bitumen Ships by M/s. Karwar Shipping for the year 2016-17 to 2018-19 up to Oct-2018 as Stevedores ನ್ನು ಈಗಾಗಲೇ ನಿಪಿ-112 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ತಾನು ನೀಡಿದ ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-113 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-113(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು, ತಾನು ನೀಡಿರುವ ಮಾಹಿತಿಯಲ್ಲಿರುವ ಶಿಪ್ಪಿಂಗ್ ಏಜೆನ್ಸಿಗಳು ನೊಂದಣಿಯಾಗಿರುವ ಶಪ್ಪಿಂಗ್ ಏಜೆನ್ಸಿಗಳಾಗಿರುತ್ತವೆ.

ಈ ಹಂತದಲ್ಲಿ ನ್ಯಾಯಾಲಯವು ಸಾಕ್ಷಿಗೆ "ಬಂದರಿನಲ್ಲಿರುವ ಏಜೆನ್ಸಿಗಳನ್ನು ನೋಂದಣಿ ಮಾಡಿಸಲು ಯಾವ ಪ್ರಕ್ರಿಯೆ ಇರುತ್ತದೆ ಹಾಗೂ ಅವುಗಳನ್ನು ಎಲ್ಲಿ ನೋಂದಾವಣೆ ಮಾಡಲಾಗುತ್ತದೆ"? ಎಂದು ಪ್ರಶ್ನೆ ಕೇಳಲಾಗಿ, ಸಾಕ್ಷಿಯು " Karnataka Ports Landing and Shipping fees amendment Rules-2006 ರ ನಿಯಮ-16 ರಲ್ಲಿ

ನೋಂದಣಿಯಾಗಲು ಅವಕಾಶವಿದ್ದು, ಅದರಂತೆ ಸದರಿ ಏಜೆನ್ಸಿಗಳು ಕಾರವಾರದ ಬಂದರು ಕಚೇರಿಯಲ್ಲಿ ನೋಂದಾವಣೆಗೊಂಡಿರುತ್ತವೆ" ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ನಿಪಿ–103 ದಾಖಲೆಯಲ್ಲಿ ಪ್ರೊಯನೂರ್ ಶಿಪ್ಪಿಂಗ್ ಏಜೆನ್ಸಿಯ ಹೆಸರು ಇರುವುದಿಲ್ಲ ಎಂದರೆ ಸರಿ. ಶಿಪ್ಪಿಂಗ್ ಏಜೆನ್ಸಿಗಳ ನೋಂದಣಿ ಮಾಹಿತಿಯು ಬಂದರು ಕಚೇರಿಯಲ್ಲಿರುತ್ತದೆ. ನಿಪಿ–103 ರಿಂದ 106 ದಾಖಲೆಗಳು ಮೂಲ ದಾಖಲೆಗಳಾಗಿರುತ್ತವೆ. ಸದರಿ ದಾಖಲೆಗಳು ಗಣಕೀಕರಣ ಮಾಡಿದ ದಾಖಲೆಗಳಾಗಿವೆ ಎಂದರೆ ಸರಿ. ಗಣಕೀಕರಣ ಮಾಡಿದವರ ಹೆಸರು ಸದರಿ ದಾಖಲೆಗಳಲ್ಲಿ ಇರುವುದಿಲ್ಲ ಎಂದರೆ ಸರಿ. ಸುಮಾರು ಪ್ರಕರಣಗಳಲ್ಲಿ ಕಂಪ್ಯೂಟರಿನಲ್ಲಿ ಗಣಕೀಕರಣ ಮಾಡಿದ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಗೆ 65–ಬಿ ಪ್ರಮಾಣ ಪತ್ರವನ್ನು ನೀಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಗಣಕೀಕರಣ ಮಾಡಿದವರ ಹೆಸರು ಮತ್ತು ಪದನಾಮವನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾವು ಯಾವುದೇ ದಾಖಲೆಗಳನ್ನು ನೀಡದಿದ್ದರೂ ಸಹ, ಪೋಲೀಸರೇ ದಾಖಲೆಗಳನ್ನು ಸೃಷ್ಠಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರ ಮಾತಿನಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಈ ದಿನ ನ್ಯಾಯಾಲಯದಲ್ಲಿ 2 ಮತ್ತು 3 ನೇ ಆರೋಪಿತರ ಪರ ವಕೀಲರು ಹಾಜರಿಲ್ಲದ ಕಾರಣ, 2 ಮತ್ತು 3 ನೇ ಆರೋಪಿತರು ಸ್ವತಃ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

5. ನಿಪಿ–9 ರ ಪ್ಯಾರಾ–2 ರಲ್ಲಿ ಅನುಬಂಧ–ಅ ಮತ್ತು ಅನುಬಂಧ–ಬ ಎಂದು ನಮೂದಿಸಿದ್ದು, ನಿಪಿ–110 ಮತ್ತು 111 ರಲ್ಲಿ ಅನುಬಂಧದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಅನುಬಂಧ–ಅ ಮತ್ತು ಅನುಬಂಧ–ಬ ಎಂದು ನಮೂದಿಸಿದ ದಾಖಲೆಗಳು ನಿಪಿ–110,

ನಿಪಿ−111 ದಾಖಲೆಗಳಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ನಾನು ನೀಡದೇ ಇದ್ದರೂ ಸಹ, ಅದೇ ದಾಖಲೆಗಳನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ−110 ಮತ್ತು 111 ದಾಖಲೆಗಳಲ್ಲಿ ನಮೂದಿಸಿರುವ ಶಿಪ್ಪಿಂಗ್ ಏಜೆನ್ಸಿಗಳು ಹಾಗೂ ಸ್ಟೀಮರ್ ಏಜೆನ್ಸಿಗಳು ನೋಂದಾವಣೆಗೊಂಡಿರುತ್ತವೆ ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸಾಕ್ಷಿಯು, ಸದರಿ ನೋಂದಾವಣೆಗೊಂಡ ದಾಖಲೆಗಳು ಬಂದರಿನ ಕಚೇರಿಯಲ್ಲಿ ಲಭ್ಯವಿರುವ ಕಾರಣ, ಅವುಗಳನ್ನು ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮಾಹಿತಿಯನ್ನು ಕೋರಿದ್ದಲ್ಲಿ, ದಾಖಲೆಗಳನ್ನು ಪರಿಶೀಲಿಸಿಯೇ ಮಾಹಿತಿ ಕೊಡಬೇಕಾಗುತ್ತದೆ ಎಂದರೆ ಸರಿ.

6. ಬಂದರು ಕಚೇರಿಯು ನನ್ನ ಅಧೀನದಲ್ಲಿ ಬರುತ್ತದೆಎಂದರೆ ಸರಿ. ಕಾರವಾರದ ಬಂದರು ಇಲಾಖೆಗೆ ನಿರ್ದೇಶಕರೇ ಮುಖ್ಯಸ್ಥರಾಗಿರುತ್ತಾರೆ ಎಂದರೆ ಸರಿ. ನಿಪಿ−103 ರಿಂದ 106 ದಾಖಲೆಗಳನ್ನು ನೀಡುವ ಮೊದಲು, ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಬಂದರು ಕಚೇರಿಯಿಂದ ತರಿಸಿ, ನಂತರ ಅವುಗಳನ್ನು ಪರಿಶೀಲಿಸಿರುತ್ತೇನೆ. ನಾನು ಪರಿಶೀಲನೆ ಮಾಡಿದ ದಾಖಲೆಗಳನ್ನು ಪೊಲೀಸ್ ವೃತ್ತ ನಿರೀಕ್ಷಕರಿಗೆ ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ಪರಿಶೀಲನೆಗಾಗಿ ಈ ಕೆಳಗಿನ ದಾಖಲೆಗಳನ್ನು ನೀಡಿರುತ್ತೇನೆ.

1. Details of registration of streamer agents,
2. Details of registration of stevedores,
3. Details of registration of Customs house agents,
4. Details of registration of garbage cleaners,
5. Vessel details containing Intercarting of Bitumen.

7. ಬಂದರಿನಲ್ಲಿ ಶಿಪ್ಪಿಂಗ್ ಏಜೆನ್ಸಿಯ ಸಂಬಂಧಿಸಿದ ವ್ಯಕ್ತಿಗಳಿಗೆ ಗುರುತಿನ ಚೀಟಿ ಇರುತ್ತದೆ ಎಂದರೆ ಸರಿ. ನಾನು ದಾಖಲೆಗಳನ್ನು ನೀಡಿದ ನಂತರ ಪೊಲೀಸರು ನನ್ನಿಂದ ಏಜೆನ್ಸಿಯ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಗುರುತಿನ ಚೀಟಿಯನ್ನು ಪಡೆದಿರುವುದಿಲ್ಲ. ನಿಪಿ−103 ರಿಂದ ನಿಪಿ−106 ಹಾಗೂ ನಿಪಿ−107 ಮತ್ತು ನಿಪಿ−109 ಗಳಿಗೆ ಯಾವುದೇ ಸಂಬಂಧ ಇಲ್ಲ

ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ